**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:-** ಶ್ರೀ ಎಸ್.ಜಿ.ಕೊರವರ, ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್ ಹಾವೇರಿ, ಇವರ ವಿರುದ್ಧ ಶಿಸ್ತುಕ್ರಮದ ಅಂತಿಮ ಆದೇಶ.

**ಓದಲಾಗಿದೆ:-** 1. ಶ್ರೀ ಎಸ್.ಜಿ.ಕೊರವರ, ಇವರಿಗೆ ಜಾರಿ ಮಾಡಿರುವ ಕಾರಣ ಕೇಳುವ ನೋಟಿಸ್ ದಿನಾಂಕ: 02.09.2013

2. ಸರ್ಕಾರದ ನೆನಪೋಲೆ ಪತ್ರ ದಿನಾಂಕ: 09.06.2011, 02.09.2011, 18.02.2011 ಮತ್ತು 21.09.2011.

****

**ಪ್ರಸ್ತಾವನೆ:**

ಹಾವೇರಿ ಜಿಲ್ಲಾ ಪಂಚಾಯತ್‌ನಲ್ಲಿ ಯೋಜನಾ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ, ಶ್ರೀ ಎಸ್.ಜಿ.ಕೊರವರ, ಇವರು 2001-02 ಮತ್ತು 2005-06ನೇ ಸಾಲಿನ ಆಸ್ತಿ ದಾಯಿತ್ವದ ವಿವರಗಳಲ್ಲಿ ಮನೆ ಬಾಡಿಗೆ ಆದಾಯ ಮತ್ತು 2005-06-ಸಾಲಿನ ಮತ್ತು 2006-07ನೇ ಸಾಲಿನ ವೇತನ ಉಳಿತಾಯ ಮಾಡಿದ ಮೊತ್ತದಲ್ಲಿ ವ್ಯತ್ಯಾಸ ಇರುವುದಕ್ಕೆ ಸ್ಪಷ್ಟ ಮಾಹಿತಿ/ದಾಖಲೆ ಮತ್ತು 2010-11ರ ಪೂರ್ವದ ಅವಧಿಗೆ ಸಲ್ಲಿಸಿದ್ದ ಆಸ್ತಿ/ದಾಯಿತ್ವದ ವಿವರಗಳಿಗೆ ಮಾಹಿತಿ/ಸ್ಪಷ್ಟೀಕರಣ ಹಾಗೂ 2010-11 ಮತ್ತು 2011-12ನೇ ಆಸ್ತಿ ದಾಯಿತ್ವದ ವಿವರಗಳನ್ನು/ದಾಖಲೆಗಳನ್ನು ಸಲ್ಲಿಸದೆ ಇರುವ ಆರೋಪಕ್ಕೆ ಸಂಬಂಧಿಸಿದಂತೆ, ಮೇಲೆ ಓದಲಾದ(1)ರ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 12 ರಡಿ ದಿನಾಂಕ: 02.09.2013 ರಲ್ಲಿ ಕಾರಣ ಕೇಳುವ ನೋಟಿಸು ಜಾರಿ ಮಾಡಲಾಗಿತ್ತು. ಈ ಸಂಬಂಧ ಅಧಿಕಾರಿಗೆ ಮೇಲೆ ಓದಲಾದ(2)ರ ದಿನಾಂಕ: 09.06.2011 02.09.2011, 18.02.2011 ಮತ್ತು 21.09.2011ರ ಪತ್ರಗಳಲ್ಲಿ ಮಾಹಿತಿ/ಸ್ಪಷ್ಟೀಕರಣ/ದಾಖಲೆ ಒಗಿಸುವಂತೆ ತಿಳಿಸಲಾಗಿದ್ದರೂ, ಸದರಿ ಪತ್ರ/ನೆನಪೋಲೆಗಳಿಗೆ ಹಾಗೂ ದಿನಾಂಕ: 02.09.2013ರ ಕಾರಣ ಕೇಳುವ ನೋಟಿಸಿಗೆ ಉತ್ತರ ನೀಡದೇ ಬೇಜವಾಬ್ದಾರಿತನ ತೋರಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 23(2)ರನ್ನು ಸ್ಪಷ್ಟವಾಗಿ ಉಲ್ಲಂಘಿಸಿರುತ್ತಾರೆ. ಆದುದರಿಂದ, ಸದರಿಯವರ ಕರ್ತವ್ಯಲೋಪಕ್ಕೆ ಸಂವಾದಿಯಾಗಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 195 ಎಪಿಆರ್ 2016 ಬೆಂಗಳೂರು ದಿನಾಂಕ: 21-09-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಸ್.ಜಿ.ಕೊರವರ, ಯೋಜನಾ ನಿರ್ದೇಶಕರು ಜಿಲ್ಲಾ ಪಂಚಾಯತ್ ಹಾವೇರಿ, ಇವರ ಕರ್ತವ್ಯಲೋಪಕ್ಕೆ ಸಂಪಾಧಿಯಾಗಿ ಕರ್ನಾಟಕ ನಾಗರೀಕ ಸೇವಾ (ವನಿಮ) ನಿಯಮಾವಳಿಗಳು 1957ರ ನಿಯಮ 8(iii) ರಡಿಯಲ್ಲಿ ಇವರ ಮುಂದಿನ **"ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಡಿಯುವ ದಂಡನೆ"**ಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

21/9/16

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಜಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು(ಜಿ&ಎಸ್‌ಎಸ್‌ಎ)/(ಇ&ಆರ್‌ಎಸ್‌ಎ)/(ಎ&ಇ) ರವರ ಕಾರ್ಯದರ್ಶಿ, ಕರ್ನಾಟಕ ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-01
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ
3. ಸಂಬಂಧಿಸಿದ ಅಧಿಕಾರಿಗೆ.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಅಪರ ಕಾರ್ಯದರ್ಶಿ(ಆಡಳಿತ) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3. ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.